ದಿನಾಂಕ 11.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ- ಶ್ರೀ. ಬಿ.ಬಿ.ಎಂ ವಕೀಲರಿಂದಃ-

ವಾದಿಯು ನನ್ನ ದೊಡ್ಡಪ್ಪನ ಮಗಳು. ಪ್ರತಿವಾದಿಗಳು ನನ್ನ ತಂದೆಯ ದೂರದ ಸಂಬಂಧಿಕರು. ಪ್ರತಿವಾದಿ 1(ಎ) ರವರು ಮೊದಲು ನಮ್ಮ ದೂರದ ಸಂಬಂಧಿಕರಾಗಿದ್ದರು. ಅವರು ಮೊದಲು ಬೆಂಗಳೂರಿನಲ್ಲಿ ವಾಸವಾಗಿದ್ದರು. ದಿನಾಂಕ **01.06.2015** ರಂದು ಪ್ರತಿವಾದಿ **1**(ಎ) ರವರು ನನ್ನನ್ನು ಅವರ ಮನೆಗೆ ಕರೆದಿರುತ್ತಾರೆ. ಆಗ ನಾನು ನನ್ನ ಅಂಗಡಿಯಲ್ಲಿದ್ದೆನು. ಸದರಿರವರ ಮನೆಯಿಂದ ನನ್ನ ಅಂಗಡಿಗೆ **70** ಮೀಟರ್ ಅಂತರವಿತ್ತು.

ಹಣದ ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆಯಾದ ಸಂದರ್ಭದಲ್ಲಿ ಪ್ರತಿವಾದಿ **1**(ಎ) ರವರು ನನ್ನನ್ನು ಅವರ ಮನೆಗೆ ಕರೆದಿದ್ದರು. ಗಲಾಟೆಯಾದ ದಿನಾಂಕ ನನಗೆ ನೆನಪಿಲ್ಲ. ಹಣದ ವಿಚಾರದಲ್ಲಿ ರಾಜೀತೀರ್ಮಾನವಾದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಹಣದ ವಿಚಾರವನ್ನು ಹೊರತು ಪಡಿಸಿ, ಬೇರೆ ವಿಚಾರದ ಬಗ್ಗೆ ಗಲಾಟೆಯಾದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಹಣದ ವ್ಯವಹಾರ ವಾದಿಯ ಗಂಡ ಹಾಗೂ ಪ್ರತಿವಾದಿ **1**(ಎ) ರವರ ನಡುವೆ ಇತ್ತು. ನಿಶಾನೆ ಪಿ-**10** ದಾಖಲೆಯನ್ನು ಹಣದ ಮರುಪಾವತಿಯ ವಿಚಾರಕ್ಕೆ ಸಂಬಂಧಿಸಿದಂತೆ ಬರೆದುಕೊಟ್ಟಿರಬಹುದು. ನಿ.ಪಿ-**10** ದಾಖಲೆಯನ್ನು ಎಲ್ಲಿ ಹಾಗೂ ಯಾರು ಬರೆದಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಸದರಿ ದಾಖಲೆ ಕೈ ಬರವಣಿಗೆಯಲ್ಲಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ನಿ.ಪಿ-**10** ದಾಖಲೆಯ ಒಕ್ಕಣೆಗಳನ್ನು ಓದಿರುವುದಿಲ್ಲ. ಆದರೆ ಅದರಲ್ಲಿನ ವಿಚಾರಗಳನ್ನು ಪ್ರತಿವಾದಿ **1**(ಎ) ರವರು ನನಗೆ ತಿಳಿಸಿರುತ್ತಾರೆ. ಅದು ಇಂಗ್ಲೀಷ್ ಭಾಷೆಯಲ್ಲಿತ್ತು.

ನಾನು ಪ್ರತಿವಾದಿ **1**(ಎ) ರವರ ಮನೆಗೆ ಹೋದ ಸಂದರ್ಭದಲ್ಲಿ ಅವರ ಮನೆಯಲ್ಲಿ ಪ್ರತಿವಾದಿ **1**(ಎ), ವಾದಿ ಮತ್ತು ಷಫೀಉಲ್ಲಾ ರವರು ಇದ್ದರು. **1**ನೇ ಪ್ರತಿವಾದಿಯು ಮನೆಯಲ್ಲಿ ಇದ್ದದ್ದನ್ನು ನಾನು ನೋಡಿರುವುದಿಲ್ಲ. ನಿ.ಪಿ-**10** ದಾಖಲೆಯ ಬಗ್ಗೆ ಪ್ರತಿವಾದಿ **1**(ಎ) ರವರ ಗಂಡ ಮತ್ತು ಮಕ್ಕಳಿಗೆ ಗೊತ್ತಿರುವ ಬಗ್ಗೆ ನಾನು ಪ್ರತಿವಾದಿ **1**(ಎ) ರವರ ಬಳಿ ಕೇಳಿರುವುದಿಲ್ಲ. ಹಣದ ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆಯಾಗಿದ್ದರೂ ಸಹಾ ಆ ಬಗ್ಗೆ ನಾನು ಕೇಳಲು ಪ್ರಯತ್ನಿಸಿರುವುದಿಲ್ಲ. ನಾನು ಮಧ್ಯಾಹ್ನ **4.30** ಗಂಟೆಗೆ ಪ್ರತಿವಾದಿ **1**(ಎ) ರವರ ಮನೆಗೆ ಹೋಗಿದ್ದೆನು. ನಿ.ಪಿ-**10** ದಾಖಲೆಯನ್ನು ಏಕೆ ಬಿಳಿ ಖಾಗದದಲ್ಲಿ ತಯಾರಿಸಲಾಗಿದೆ ಎಂಬ ಬಗ್ಗೆ ನಾನು ಅವರನ್ನು ಕೇಳಿರುವುದಿಲ್ಲ.

ವಾದಿಯ ಗಂಡ ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತಿದ್ದರು. ಅಲ್ಲದೇ ಫ್ಲೋರ್ ಮಿಲ್ ಅನ್ನು ಇಟ್ಟುಕೊಂಡಿದ್ದರು. ಪ್ರತಿವಾದಿ **1**(ಎ) ರವರು ವಿರಾಜಪೇಟೆಯಲ್ಲಿ ಹಾಗೂ ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು. ಅವರು ಬೆಂಗಳೂರಿನಿಂದ ವಿರಾಜಪೇಟೆಗೆ ತನ್ನ ಗಂಡನ ಜೊತೆ ಬಂದು ಹೋಗುತ್ತಿದ್ದರು. ಪ್ರತಿವಾದಿ **1**(ಎ) ರವರು  ದಾವಾಸ್ವತ್ತನ್ನು ಬಾಡಿಗೆಗೆ ನೀಡಿರುತ್ತಾರೆ ಎಂದರೆ ಸರಿ. ದಾವಾಸ್ವತ್ತಿನಿಂದ ಬರುತ್ತಿದ್ದ ಬಾಡಿಗೆಯ ಹಣವನ್ನು ಪ್ರತಿವಾದಿ **1**(ಎ) ರವರು ಪಡೆದುಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ನಿ.ಪಿ-**10** ದಾಖಲೆಗೆ ಸಹಿ ಮಾಡಿದ ಬಳಿಕವೂ ಸಹಾ ಪ್ರತಿವಾದಿ **1**(ಎ) ರವರು  ಬಾಡಿಗೆ ಹಣವನ್ನು ಪಡೆದುಕೊಳ್ಳುತ್ತಿದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ದಿನಾಂಕ **21.05.2015** ರಂದು ದಾವಾಸ್ವತ್ತುಗಳ ವಿಚಾರವಾಗಿ ಗಲಾಟೆಯಾಗಿದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿ ಮತ್ತು

ಪ್ರತಿವಾದಿಗಳ ನಡುವೆ ಆದ ಗಲಾಟೆಯ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಪೋಲೀಸ್ ಠಾಣೆಗೆ ಹೋಗಿದ್ದೆನು. ಪೋಲೀಸ್ ಠಾಣೆಯಲ್ಲಿ ಏನು ಮಾತುಕತೆ ಆಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಗಲಾಟೆಯಾದ ಬಳಿಕ, ದಾವಾಸ್ವತ್ತುಗಳಲ್ಲಿದ್ದ ಮನೆಗೆ ಬೀಗ ಹಾಕಿಕೊಂಡು ಹೋಗಿದ್ದ ವಿಚಾರ ನನಗೆ ಗೊತ್ತಿಲ್ಲ.

ಪ್ರತಿವಾದಿ 1(ಎ) ರವರು ದಿನಾಂಕ **28.05.2015** ರಂದು ಬೆಂಗಳೂರಿಗೆ ಹೋಗಿ, ಪುನಃ ವಿರಾಜಪೇಟೆಗೆ ಸೆಪ್ಟೆಂಬರ್ **2015** ರಂದು ಹಿಂತಿರುಗಿ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ **01.06.2015** ರಂದು ನಾನು ನಿ.ಪಿ-10 ದಾಖಲೆಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯು ಸೇರಿಕೊಂಡು ನಿ.ಪಿ-10 ದಾಖಲೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ನಿ.ಪಿ-10 ದಾಖಲೆಯನ್ನು ಹೊರತು ಪಡಿಸಿ, ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಯಾವುದೇ ವ್ಯವಹರಣೆಯ ದಾಖಲೆಗಳಿಗೆ ಸಹಿ ಮಾಡಿರುವುದಿಲ್ಲ. ವಾದಿಯು ನನ್ನ ಸಂಬಂಧಿಯಾಗಿರುವುದರಿಂದ ಅವರು ನಿ.ಪಿ-10 ದಾಖಲೆಯನ್ನು ಸೃಷ್ಟಿ ಮಾಡಿದ್ದಾರೆಂದು ನನಗೆ ಗೊತ್ತಿದ್ದರೂ ಸಹಾ ನಾನು ಸದರಿ ದಾಖಲೆಗೆ ಸಹಿ ಮಾಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ-10 ದಾಖಲೆಯ ಪ್ರಕಾರ ದಾವಾಸ್ವತ್ತುಗಳ ಕಂದಾಯ ದಾಖಲೆಗಳು ವಾದಿಯ ಹೆಸರಿಗೆ ಬದಲಾವಣೆ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿ 1(ಎ) ರವರು ದಾವಾ ಸ್ವತ್ತುಗಳ ಸ್ವಾಧೀನವನ್ನು ವಾದಿಗೆ ಯಾವತ್ತೂ ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ-** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.